# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ –2

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಶುಕ್ರವಾರ, ದಿನಾಂಕ: 9ನೇ ಅಕ್ಟೋಬರ್, 2026**

*****

**ಸಂಖ್ಯೆ:47**

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (KSCA) ವತಿಯಿಂದ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಿನ 5ನೇ ಟಿ–20 ಅಂತರರಾಷ್ಟ್ರೀಯ ಪಂದ್ಯವನ್ನು ದಿನಾಂಕ: 17ನೇ ಅಕ್ಟೋಬರ್,2026ರಂದು ಸಂಜೆ 7.00 ಗಂಟೆಗೆ. ಎಂ. ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು ಇಲ್ಲಿ ಆಯೋಜಿಸಲಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಯವರೊಂದಿಗೆ ನಡೆದ ಸಭೆಯಲ್ಲಿ ಒಪ್ಪಿರುವಂತೆ KSCA ವತಿಯಿಂದ ಮಾನ್ಯ ವಿಧಾನ ಪರಿಷತ್ತಿನ ಶಾಸಕರುಗಳಿಗಾಗಿ ಪ್ರತ್ಯೇಕ ವಿಶೇಷ ಸ್ಟ್ಯಾಂಡ್ ಮೀಸಲಿಡಲಾಗಿರುತ್ತದೆ. ಮಾನ್ಯ ಶಾಸಕರುಗಳಿಗೆ ಈ ವಿಶೇಷ ಸ್ಟ್ಯಾಂಡ್‌ನಲ್ಲಿ ಈ ಕೆಳಗಿನಂತೆ ಟಿಕೆಟ್‌ಗಳು ಲಭ್ಯವಿರುತ್ತದೆ.

**ಅ. ಉಚಿತ ಟಿಕೆಟ್‌ಗಳು ಎರಡು(2).**

* ಪ್ರತಿ ಮಾನ್ಯ ಶಾಸಕರುಗಳಿಗೆ ಎರಡು (2) ಉಚಿತ ಟಿಕೆಟ್‌ಗಳನ್ನು ದಿನಾಂಕ: 16&17ನೇ ಅಕ್ಟೋಬರ್, 2026ರಂದು ಮಾನ್ಯ ಸಭಾಪತಿಯವರ ಆಪ್ತ ಸಿಬ್ಬಂದಿ ಶಾಖೆಯಿಂದ ವಿತರಿಸಲಾಗುವುದು.
* ಮಾನ್ಯ ಶಾಸಕರುಗಳು/ ಅವರ ಆಪ್ತ ಸಹಾಯಕರುಗಳು ಟಿಕೆಟ್‌ಗಳು ಪಡೆಯಬಹುದಾಗಿದೆ.

**ಆ. ಹಣ ಪಾವತಿಸಿ ಪಡೆಯುವ ಟಿಕೆಟ್‌ಗಳು ಗರಿಷ್ಠ ಎರಡು (2).**

* ಪ್ರತಿ ಟಿಕೆಟ್‌ಗೆ ರೂ 3,500/– (ಊಟ ಮತ್ತು ಆತಿಥ್ಯ ಸೇರಿ).
* ಈ ಟಿಕೆಟ್‌ಗಳು ಸಂಪೂರ್ಣ ಡಿಜಿಟಲ್ ಆಗಿದ್ದು, ಬಾಕ್ಸ್ ಆಫಿಸ್ ಅಥವಾ ಸಾರ್ವಜನಿಕ ಮಾರಾಟದಲ್ಲಿ ಲಭ್ಯವಿರುವುದಿಲ್ಲ.

...2...

* ನೋಂದಾಯಿತ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುವ ಸುರಕ್ಷಿತ ಪಾವತಿ ಲಿಂಕ್ ಮೂಲಕ ಮಾತ್ರ ಆನ್‌ಲೈನ್‌ನಲ್ಲಿ ಖರೀದಿಸಬೇಕು.

**ಹಣ ಪಾವತಿಸಿ ಪಡೆಯುವ ಟಿಕೆಟ್‌ಗಳಿಗೆ ಕ್ರಮ:**

ಹಣ ಪಾವತಿಸಿ ಟಿಕೆಟ್ ಖರೀದಿಸಲು ಇಚ್ಛಿಸುವ ಮಾನ್ಯ ಶಾಸಕರು, ಪಾವತಿ ಲಿಂಕ್ ಕಳುಹಿಸಬೇಕಾದ ಮೊಬೈಲ್ ಸಂಖ್ಯೆಯನ್ನು KSCA ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಾದ ಶ್ರೀ ಸುಬೇಂದು ಘೋಷ್, ಮೊಬೈಲ್ ಸಂಖ್ಯೆ: 9611112903, email ceo&ksca.co.in ಗೆ ದಿನಾಂಕ: 12ನೇ ಅಕ್ಟೋಬರ್, 2026, ಸೋಮವಾರದೊಳಗೆ ಕಳುಹಿಸಿಕೊಡಬೇಕಾಗಿರುತ್ತದೆ.

ಈ ಸಂಬಂಧದಲ್ಲಿ ಹೆಚ್ಚಿನ ಸ್ಪಷ್ಟೀಕರಣಕ್ಕಾಗಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, KSCA ಎಂ. ಚಿನ್ನಸ್ವಾಮಿ ಕ್ರೀಡಾಂಗಣ ಅವರ ಕಛೇರಿಯನ್ನು ಸಂಪರ್ಕಿಸಬಹುದೆಂದು ಈ ಮೂಲಕ ಎಲ್ಲಾ ಮಾನ್ಯ ಶಾಸಕರುಗಳ ಆದ್ಯ ಗಮನಕ್ಕೆ ತಿಳಿಯಪಡಿಸಲಾಗಿದೆ.

**ಜ್ಯೋತಿ**
**ಕಾರ್ಯದರ್ಶಿ(ಪ್ರ)**

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳ ಮಾಹಿತಿಗಾಗಿ.**

**www.kla.kar.nic.in/council/council.htm**